ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು):

1) ಹೌದು

2) ದಿನಾಂಕ 1.6.87 ರ ನಂತರ ಮಂಜೂರಾದ ಶಾಲೆಗಳನ್ನು ಶಾಶ್ವತ ಅನುದಾನ ರಹಿತ ಶಾಲೆಗಳೆಂದು ಪರಿಗಣಿಸಿರುವುದರಿಂದ, ಈ ಶಾಲೆಗಳಿಗೆ ಅನುದಾನ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಮಾಲೂರು ತಾಲ್ಲೂಕಿನಲ್ಲಿ ಕಿರುನೀರು ಸರಬರಾಜು

404 (656) ಶ್ರೀ ಹೆಚ್. ಬಿ. ದ್ಯಾವೀರಪ್ಪ (ಮಾಲೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಮಾಲೂರು ತಾಲ್ಲೂಕಿನಲ್ಲಿ ಕಿರುನೀರು ಸರಬರಾಜು ಯೋಜನೆ ಮತ್ತು ಕೈಪಂಪುಗಳನ್ನು ಅಳವಡಿಸಿರುವ ಕೊಳವೆಬಾವಿಗಳ ಸಂಖ್ಯೆ ಎಷ್ಟು?

2) ಆ ಪೈಕಿ ನೀರಿಲ್ಲದೆ ಬತ್ತಿ ಹೋಗಿರುವ ಕೊಳವೆ ಬಾವಿಗಳೆಷ್ಟು?

3) ತಾಲ್ಲೂಕಿನಲ್ಲಿ ಹಿಂದೆ ಕೊರೆದಿದ್ದ 150 ರಿಂದ 250 ಅಡಿಗಳ ಕೊಳವೆಬಾವಿಗಳು ಅಂತರ್ಜಲ 500 ಅಡಿಗಳ ಆಳದವರೆಗೂ ಹೋಗಿರುವುದರಿಂದ ನೀರು ಬತ್ತಿ ಹೋಗಿರುವುದು ನಿಜವೇ?

4) ಇದನ್ನು ಪುನ: ಶ್ಚೇತನಗೊಳಿಸಲು ತೆಗೆದುಕೊಂಡಿರುವ ಕ್ರಮಗಳೇನು?

5) 500 ಅಡಿಗಳ ಆಳದಿಂದ ನೀರೆತ್ತುವ ಕೈಪಂಪುಗಳು ನಿಷ್ಕ್ರಿಯವಾಗಿರುವ ಪ್ರಯುಕ್ತ ಎಲ್ಲಾ ಹಳ್ಳಿಗಳಿಗೂ ಕಿರು ನೀರು ಸರಬರಾಜು ಯೋಜನೆಯನ್ನು ಕೈಗೊಳ್ಳಲಾಗುವುದೇ?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

1) ಮಾಲೂರು ತಾಲ್ಲೂಕಿನ ಗ್ರಾಮೀಣ ಪ್ರದೇಶದಲ್ಲಿ 35 ನಳನೀರು ಸರಬರಾಜು 120 ಕಿರುನೀರು ಸರಬರಾಜು ಹಾಗೂ 750 ಕೈಪಂಪು ಕೊಳವೆಬಾವಿಗಳು ಕಾರ್ಯನಿರ್ವಹಿಸುತ್ತಿವೆ.

2) ಮೇಲ್ಕಂಡ ಎಲ್ಲಾ 905 ಕೊಳವೆಬಾವಿಗಳು ಸುಸ್ಥಿತಿಯಲ್ಲಿದ್ದು, ಯಾವುದೂ ಬತ್ತಿ ಹೋಗಿರುವುದಿಲ್ಲ.

3) ತಾಲ್ಲೂಕಿನಲ್ಲಿ, ಹಿಂದೆ 150 ರಿಂದ 250 ಅಡಿ ಆಳದವರೆಗೆ ಕೊರೆದಿದ್ದ ಕೆಲವ ಬಾವಿಗಳಲ್ಲಿ ನೀರಿನ ಮಟ್ಟ ಕೆಳಕ್ಕೆ ಹೋಗಿರುವುದು ನಿಜ.

4) ಇಂತಹ ಕೊಳವೆ ಬಾವಿಗಳ ಇಳುವರಿಯನ್ನು ಹೈಡ್ರೋಫ್ರಾಕ್ಚರ್ ವಿಧಾನದಿಂದ ಹೆಚ್ಚಿಸಲು ಪ್ರಯತ್ನಿಸಲಾಗುತ್ತಿದೆ.

5) ಕೊಳವೆ ಬಾವಿಗಳ ಅಂತರ್ಜಲ ಮಟ್ಟ ಕೈಪಂಪು ನೀರೆತ್ತುವ ಸಾಮರ್ಥ್ಯಕ್ಕಿಂತ ಕೆಳಗೆ ಹೋದ ಗ್ರಾಮಗಳಲ್ಲಿ ಕೊಳವೆ ಬಾವಿಗಳ ಇಳುವರಿಯನ್ನು ಹೈಡ್ರೋಫ್ರಾಕ್ಚರ್ ಮುಖಾಂತರ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದು.